# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 688
2) ಸದಸ್ಯರ ಹೆಸರು : ಶ್ರೀ ಕಾಂತರಾಜ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸುವ ದಿನಾಂಕ: : 04-03-2021
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತೆರಿಗೆ ಎಂದರೇನು; ಅವುಗಳಲ್ಲಿ ಎಷ್ಟು ವಿಧ; ಅವು ಯಾವುವು; ಬ್ರಿಟಿಷ್ ಕಾಲದಿಂದ ಇಲ್ಲಿಯವರೆಗೂ ತೆರಿಗೆಯ ಇತಿಹಾಸವೇನು; (ವಿವರವಾದ ಮಾಹಿತಿ ಒದಗಿಸುವುದು) | ತೆರಿಗೆಯು ಸರ್ಕಾರದ ಆರ್ಥಿಕ ವ್ಯವಸ್ಥೆಯ ಒಂದು ಭಾಗ. ಸರ್ಕಾರ ಅಥವಾ ಅದರ ಕಾರ್ಯಾತ್ಮಕ ಸಮಾನವಾದ ಸಂಸ್ಥೆಯು ತೆರಿಗೆದಾರನ ಮೇಲೆ ವಿಧಿಸುವ ಶುಲ್ಕ. ಮಾರಾಟಗಾರ ಮತ್ತು ಕೊಳ್ಳುವವರ ಮಧ್ಯೆ ಸರಕು ಅಥವಾ ಸೇವೆಯೊಂದು ಮಾರಲ್ಪಟ್ಟಾಗ ವಾಣಿಜ್ಯ ತೆರಿಗೆ ಇಲಾಖೆಯು ಸದರಿ ವಸ್ತುವಿನ ಮೇಲೆ ವಿಧಿಸುವ ಶುಲ್ಕವನ್ನು ತೆರಿಗೆಯೆಂದು ಕರೆಯಲಾಗುವುದು. ಮಾರಲ್ಪಡುವ ಸರಕು ಕಣ್ಣಿಗೆ ಕಾಣಿಸುವ ಅಥವಾ ಕಾಣಿಸದಿರುವ ವಸ್ತು ಆಗಿರಬಹುದು. ಸ್ಥಳೀಯ ಸರ್ಕಾರ ಈ ತೆರಿಗೆಯನ್ನು ಸಮಾಜದ ಅಭಿವೃದ್ಧಿ ಕಾರ್ಯಗಳಿಗೆ ಹಾಗೂ ತನ್ನ ಆಡಳಿತ ವ್ಯವಸ್ಥೆಗಳಿಗೆ ವ್ಯಯ ಮಾಡುತ್ತದೆ.<br><br>ತೆರಿಗೆಗಳಲ್ಲಿ ಪ್ರತ್ಯಕ್ಷ ತೆರಿಗೆ ಮತ್ತು ಪರೋಕ್ಷ ತೆರಿಗೆ ಎಂಬ ಎರಡು ವಿಧಗಳಿವೆ.<br><br>ವಾಣಿಜ್ಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ<br>ದಿನಾಂಕ:01-04-1957 ರಿಂದ 31-03-2005ರವರೆಗೆ ಕರ್ನಾಟಕ ಮಾರಾಟ ತೆರಿಗೆ<br>ದಿನಾಂಕ:01-04-2005 ರಿಂದ 31-06-2017ರವರೆಗೆ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಹಾಗೂ<br>ದಿನಾಂಕ:01-07-2017 ರಿಂದ ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಗಳು ಜಾರಿಯಲ್ಲಿರುತ್ತದೆ. |
| ಆ) | ತೆರಿಗೆಯ ವಿವಿಧ ಸ್ತರಗಳು ಯಾವುವು;<br><br>ರಾಜ್ಯದಲ್ಲಿ ಹಾಲಿ ಜಾರಿಯಲ್ಲಿರುವ ತೆರಿಗೆಗಳು ಯಾವುವು; (ವಿವರವಾಗಿ ಸ್ತರವಾರು/ಸರಕುವಾರು ಮಾಹಿತಿ ಒದಗಿಸುವುದು) | ವಾಣಿಜ್ಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ ಪ್ರಸ್ತುತ ಸರಕು ಮತ್ತು ಸೇವಾ ತೆರಿಗೆ ಹಾಗೂ ವೃತ್ತಿ ತೆರಿಗೆ ಕಾಯ್ದೆಗಳು ಜಾರಿಯಲ್ಲಿರುತ್ತವೆ. |

| | | |
|---|---|---|
| ಇ) | 2020–21ರ ಆರ್ಥಿಕ ವರ್ಷದಲ್ಲಿ ರಾಜಸ್ವಕ್ಕೆ ಶೇಖರಣೆಗೊಂಡ ತೆರಿಗೆ ಪ್ರಮಾಣ ಎಷ್ಟು; ಎಷ್ಟು ಕೊರತೆಯುಂಟಾಗಿದೆ; ಕೊರತೆ ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರವಾದ ಮಾಹಿತಿ ಒದಗಿಸುವುದು) | ವಾಣಿಜ್ಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ 2020–21ನೇ ಸಾಲಿಗೆ ನಿಗಧಿಪಡಿಸಿದ ತೆರಿಗೆ ಗುರಿ: ರೂ. 82443.00 ಕೋಟಿಗಳು<br>ಸಂಗ್ರಹಸಿದ ತೆರಿಗೆ (ಜನವರಿ–21ರ ಅಂತ್ಯಕ್ಕೆ) : ರೂ. 64458.00 ಕೋಟಿಗಳು<br>ಸಂಗ್ರಹಿಸಬೇಕಾದ ಬಾಕಿ ತೆರಿಗೆ: ರೂ. 17985.00 ಕೋಟಿಗಳು<br><br>ಬಾಕಿ ತೆರಿಗೆಯನ್ನು 2021ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಸಂಗ್ರಹಿಸಲಾಗುವುದು. |
| ಈ) | ವಿವಿಧ ತೆರಿಗೆಗಳಿಂದ ರಾಜ್ಯದ ಜನರು ತತ್ತರಿಸುತ್ತಿದ್ದು ರಾಜ್ಯದಲ್ಲಿ ತೆರಿಗೆ ಸುಧಾರಣೆ ಬಗ್ಗೆ ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ? | ಪ್ರಸ್ತುತ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಜಾರಿಯಲ್ಲಿರುವುದರಿಂದ, ಜಿಎಸ್‌ಟಿ ತೆರಿಗೆಯ ದರಗಳಲ್ಲಿ ಯಾವುದೇ ಬದಲಾವಣೆ ಮಾಡುವ ಬಗ್ಗೆ ಜಿಎಸ್‌ಟಿ ಪರಿಷತ್ತು ತೀರ್ಮಾನ ಕೈಗೊಳ್ಳುತ್ತದೆ. ರಾಜ್ಯ ಸರ್ಕಾರವು ಅವಶ್ಯಕತೆಗೆ ಅನುಸಾರವಾಗಿ ಅಬಕಾರಿ ಸುಂಕ, ಪೆಟ್ರೋಲ್ ಮತ್ತು ಡೀಸೆಲ್‌ಗಳ ಮೇಲೆ ಅಧಿಕ ಅಬಕಾರಿ ಸುಂಕವನ್ನು ವಿಧಿಸುತ್ತಿದೆ. ದಕ್ಷಿಣದ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕದಲ್ಲಿ ಪೆಟ್ರೋಲ್/ಡೀಸೆಲ್ ಮೇಲಿನ ಅಬಕಾರಿ ಸುಂಕವು ಅತೀ ಕಡಿಮೆ ಇರುತ್ತದೆ. |

ಸಂಖ್ಯೆ: ಆಇ 18 ಸಿಎಸ್‌ಎಲ್ 2021

ಬಿಎಸ್‌ವೈ

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ.